Hungund

V.M.K.S.R.Vastrad Art,Science And V.S.Bellihal Commerce College

# Road Safety Week

**"Follow road safety rules strictly to save lives" : Shri. Ayyanagouda. Patil.**

**Hungund :** " Follow road safety rules strictly to save lives. Natural disasters are not in our hands, but we can save our lives by being cautious about road safety rules" said C.P.I Hungund Shri.Ayyanagouda Patil.

He was addressing the students as the chief guest at a function ' Road Safety Week' organized by VMKSR Vastrad Arts, Science and VS Bellihal Commerce College Hungund in association with IQAC,NSS,NCC,Bharat Scouts and Guides and Police station Hungund on12-02-2021. Shri Sharanappa. Sangalad, PSI Hungund told the students not to drink and drive to save their valuable life. Lady P.S.I(Smt) S.R.Nayak urged the students not to use mobile while driving.

The function was presided over by the Principal (Smt) Shashikala. K. Math. She emphasized the need of following the road safety rules. The convener, Bharat Scouts and Guides, Smt, S.B.Amalikoppa, IQAC coordinator Dr. S.R. Golagond were present. NCC officer, Lt, S.B. Chalageri welcomed and introduced the guests.

NSS Officer Dr. Tippeswami D.S. did introductory remarks. Miss.Savitri.B.Prayed. The convener Bharat Scout and Guides, Shri S.R.Nagannavar thanked all. All the teaching, non teaching staff and students participated in the function. Later rally was organised in the city to create awareness about road safety.

12-2-2021

Coordinator
IQAC
Vijaya Mahantesh Krupapohit S.R.Vastrad Arts,Science & Vijay Shankarappa Bellihal Commerce College, Hungund-587118
Dist:Bagalkote State:Karnataka

Principal
PRINCIPAL
Vijaya Mahantesh Krupaposhit S.R.Vastrad Arts, Science And Vijay Shankarappa Bellihal Commerce College Hungund-587118 (Dist:Bagalkot-Karnataka

**ವಿ.ಎಂ.ಕೆ.ಎಸ್. ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿಜಯ ಶಂಕರಪ್ಪ ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ**

೧೨.೦೨.೨೦೨೧

ಹುನಗುಂದ ಇಂದು ಸ್ಥಳೀಯ ಎಸ್. ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿಜಯ ಶಂಕರಪ್ಪ ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದ ಐಕ್ಯೂಎಸಿ, ಎನ್.ಸಿ.ಸಿ., ಎನ್.ಎಸ್.ಎಸ್., ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಹಾಗೂ ಹುನಗುಂದ ಪೋಲಿಸ್ ಠಾಣೆಯ ಸಹಯೋಗದೊಂದಿಗೆ ರಸ್ತಾ ಸುರಕ್ಷಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಹುನಗುಂದ ಸಿ.ಪಿ.ಐ ಶ್ರೀ ಅಯ್ಯನಗೌಡ ಪಾಟೀಲರ ಮಾತನಾಡುತ್ತಾ, ರಸ್ತೆ ಸುರಕ್ಷಾ ಸಪ್ತಾಹ ಆಚರಿಸಿದರೆ ಸಾಲದು ರಸ್ತೆಯಲ್ಲಿ ಸಂಚರಿಸುವಾಗ, ವಾಹನ ಚಾಲನೆ ಮಾಡುತ್ತಿರುವಾಗ ಅನುಸರಿಸಬೇಕಾದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ರಸ್ತೆಯಲ್ಲಿ ಸಂಚರಿಸುವ ಪ್ರತಿಯೊಬ್ಬನೂ ಎಚ್ಚರಿಕೆಯಿಂದ ಇರಬೇಕು ಎಂದರು. ನಿಯಮಗಳನ್ನು ತಪ್ಪಿ ನಡೆದರೆ ಜೀವನವೇ ನಾಶವಾಗುತ್ತದೆ. ನಿಸರ್ಗ ವಿಕೋಪಗಳಿಂದಾಗುವ ಅನಾಹುತಗಳು ನಮ್ಮ ಕೈಯಲ್ಲಿ ಇಲ್ಲ ಆದರೆ ನಮ್ಮ ಕೈಯಲ್ಲಿರುವ ಜೀವವನ್ನು ಅನ್ಯಾಯವಾಗಿ ನಾವಾಗಲೇ ನಾಶಮಾಡಿಕೊಳ್ಳಬಾರದು, ನಿಮ್ಮ ಸುರಕ್ಷತೆಯ ಹಿಂದೆ ನಿಮ್ಮ ಕುಟುಂಬದ ರಕ್ಷಣೆಯೇ ಇದೆ. ಅದಕ್ಕಾಗಿ ನಿಮ್ಮ ಅವಲಂಬಿತರನ್ನು ಕಾಪಾಡುವದು ಅವಶ್ಯಕವಾಗಿದೆ ಎಂದರು. ಒಬ್ಬನಿಂದಲೇ ಏನೂ ಸುಧಾರಣೆ ಮಾಡಲಾಗದು ಎಂಬ ಭಾವನೆ ಇರಬಾರದು ಒಬ್ಬನು ಸುಧಾರಿಸಿದರೆ ನಿನ್ನಂದ ಸಮಾಜವೇ ಸುಧಾರಿಸುವುದು ಎಂದು ಹೇಳಿದರು.

ಪಿ.ಎಸ್.ಆಯ್ ಶ್ರೀ ಶರಣಬಸಪ್ಪ ಸಂಗಳದ ಅವರು ಮಾತನಾಡುತ್ತಾ ಮಾನವನ ಜೀವನ ಅಮೂಲ್ಯವಾದುದು ಅದನ್ನು ಉಳಿಸಿಕೊಳ್ಳುವುದು ತುಂಬಾ ಅವಶ್ಯ. ಮದ್ಯಪಾನ, ವೇಗವಾಗಿ ವಾಹನ ಚಾಲನೆ ಮಾಡುವುದರಿಂದ ನಿಮ್ಮ ಅಂತ್ಯಕ್ಕೆ ನೀವೇ ಕಾರಣರಾಗಬಹುದು ಅದಕ್ಕೆ ರಸ್ತೆ ಸುರಕ್ಷಾ ನಿಯಮಗಳ ಪಾಲನೆ ಅಗತ್ಯ ಎಂದರು. ರಸ್ತೆ ಅಪಘಾತದಿಂದ ಆಗಿರುವ ಸಾವು, ನೋವುಗಳನ್ನು ಅಂಕಿಸಂಖ್ಯೆ ಸಮೇತವಾಗಿ ವಿದ್ಯಾರ್ಥಿಗಳಿಗೆ ತಿಳಿಸುವುದರ ಮೂಲಕ ಜಾಗೃತಿ ಮೂಡಿಸಿದರು.

ಮಹಿಳಾ ಪಿ.ಎಸ್.ಆಯ್. ಶ್ರೀಮತಿ ಎಸ್.ಆರ್.ನಾಯಕ ಅವರು ಮಾತನಾಡುತ್ತಾ ವಿದ್ಯಾರ್ಥಿಗಳು ವಾಹನ ಚಲಿಸುವಾಗ ವೇಗದ ಮಿತಿ ಕಡೆಗೆ ಗಮನ ಹರಿಸುವ ಅವಶ್ಯಕತೆಯೊಂದಿಗೆ ಮೋಬೈಲ ಬಳಕೆಯನ್ನು ದೂರವಾಗಿಡಬೇಕು ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀಮತಿ ಶಶಿಕಲಾ ಮಠ ಅವರು ವಿದ್ಯಾರ್ಥಿಗಳು ತಮ್ಮ ಜೀವನದ ಅಮೂಲ್ಯವಾದ ದಿನಗಳನ್ನು ಹಾಳು ಮಾಡಿಕೊಳ್ಳದೇ ತಮ್ಮ ಗುರಿಯನ್ನು ತಲುಪುವತ್ತ ಜಾಗೃತರಾಗಬೇಕು ಅದಕ್ಕಾಗಿ ವಿದ್ಯಾರ್ಥಿ ದೆಸೆಯಲ್ಲಿ ಸಾಧನೆಯ ಮೆಟ್ಟಿಲನ್ನೇರುವ ಪ್ರಯತ್ನ ನಿಮ್ಮದಾಗಿಸಿಕೊಳ್ಳಬೇಕಾದರೆ ತಮ್ಮ ಜೀವದ ರಕ್ಷಣೆ ಮಾಡಿಕೊಳ್ಳುವುದು ಅವಶ್ಯ ಅದಕ್ಕಾಗಿ ರಸ್ತೆಯಲ್ಲಿ ಸಂಚರಿಸುವಾಗ, ವಾಹನ ಚಾಲನೆ ಮಾಡುವಾಗ ರಸ್ತೆಯ ನಿಯಮಗಳನ್ನು ಪಾಲಿಸಿ ನಿಮ್ಮ ಅವಲಂಬಿತರ, ನಿಮ್ಮ ಜವಾಬ್ದಾರಿಯ ಬಗ್ಗೆ ಎಚ್ಚರವಿರಲಿ ಎಂದು ಅಧ್ಯಕ್ಷೀಯ ಸಮಾರೋಪದ ನುಡಿಗಳನ್ನಾಡಿದರು. ವೇದಿಕೆಯ ಮೇಲೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ದ ಮಹಿಳಾ ಘಟಕದ ಸಂಚಾಲಕಿ ಶ್ರೀಮತಿ ಎಸ್.ಬಿ.ಅಮಲಿಕೊಪ್ಪ, ಐಕ್ಯೂಎಸಿ ಸಂಚಾಲಕ ಡಾ.ಎಸ್.ಆರ್.ಗೋಲಗೊಂಡ ಉಪಸ್ಥಿತರಿದ್ದರು. ಎನ್.ಸಿ.ಸಿ ಅಧಿಕಾರಿ ಲೆಪ್ಟಿನೆಂಟ್ ಎಸ್.ಬಿ.ಚಳಗೇರಿಯವರು ಅತಿಥಿಗಳನ್ನು ಸ್ವಾಗತಿಸಿದರು, ಎನ್.ಎಸ್.ಎಸ್.ಅಧಿಕಾರಿ ಡಾ.ತಿಪ್ಪೇಸ್ವಾಮಿ ಡಿ.ಎಸ್.ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕುಮಾರಿ ಸಾವಿತ್ರಿ.ಬಿ. ಪ್ರಾರ್ಥನೆಗೈದರು, ಪ್ರೊ.ಎಸ್.ಆರ್.ನಾಗಣ್ಣವರ ವಂದಿಸಿದರು.

12.02.2021

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

PRINCIPAL
Vijaya Mahantesh Krupaposhit
S.R.Vastrad Arts, Science And Vijay
Shankarappa Bellihal Commerce College
Hungund-587118 Dist:Bagalkot-Karnataka